# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 28.12.2010**

## ರುದ್ರಭೂಮಿ ಮತ್ತು ಕ್ರಿಮಿಟೋರಿಯಂಗಳಿಗೆ ಉಪ ಮಹಾಪೌರರ ಭೇಟಿ

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಮಹಾಪೌರರಾದ ಶ್ರೀ ಎನ್.ದಯಾನಂದ್ ರವರು ವಿಲ್ಸನ್ ಗಾರ್ಡನ್ ಹಾಗೂ ಟಿ.ಆರ್. ಮಿಲ್‌ನ ಸಾರ್ವಜನಿಕ ರುದ್ರಭೂಮಿ ಹಾಗೂ ವಿದ್ಯುತ್ ಚಿತಾಗಾರಗಳಿಗೆ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಬಿ.ವಿ. ಗಣೇಶ್ ರವರೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು.

25 ಎಕರೆಯ ಪ್ರದೇಶದ ವಿಲ್ಸನ್ ಗಾರ್ಡನ್ ರುದ್ರಭೂಮಿಯಲ್ಲಿ ಪೂರ್ತಿಯಾಗಿ ಗಿಡಗಂಟೆಗಳು, ಬೇಲಿ ಮುಳ್ಳುಗಳು ಹರಡಿರುವುದರಿಂದ ಹಾವುಗಳು ಹಾಗೂ ಇನ್ನಿತರ ವಿಷಜಂತುಗಳು ಓಡಾಡುತ್ತಿರುವುದರಿಂದ ಮೃತಪಟ್ಟ ತಮ್ಮ ಸಂಬಂಧಿಗಳ ಸಮಾದಿಗಳಿಗೆ ಪೂಜೆ ಮಾಡಲಾಗುತ್ತಿಲ್ಲ ಹಾಗೂ ರುದ್ರಭೂಮಿಯಲ್ಲಿ ಯಾವುದೇ ರೀತಿಯ ಕುಡಿಯುವ ನೀರು ಇನ್ನಿತರ ಸೌಲಭ್ಯಗಳು ಇರುವುದಿಲ್ಲವೆಂದು ಸಾರ್ವಜನಿಕರು ದೂರು ನೀಡಿರುವ ಹಿನ್ನೆಲೆಯಲ್ಲಿ ಇಂದು ತಪಾಸಣೆಯನ್ನು ಕೈಗೊಂಡ ಉಪ ಮಹಾಪೌರರು ಸ್ಥಳ ಪರಿಶೀಲಿಸುತ್ತಾ, ರುದ್ರಭೂಮಿಯ ಬಹುತೇಕ ಭಾಗವು ಗಿಡಗಂಟೆಗಳಿಂದ ಹಬ್ಬಿರುವುದನ್ನು ನೋಡಿ, ಕೂಡಲೇ ಗಿಡಗಂಟೆಗಳನ್ನು ತೆಗೆಯಿಸಿ ಸ್ವಚ್ಛಗೊಳಿಸಲು ಹಾಗೂ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಶ್ರೀ ಷಣ್ಮುಖಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರವರಿಗೆ ಒಂದು ತಿಂಗಳ ಗಡುವು ನೀಡುತ್ತಾ, ರುದ್ರಭೂಮಿಯಲ್ಲಿರುವ ತ್ಯಾಜ್ಯ ಕಸವನ್ನು ವಿಲೇವಾರಿಗೊಳಿಸಲು ಒಂದು ವಾರದ ಗಡುವು ನೀಡಿದರು. ಅದಕ್ಕೆ ಅಭಿಯಂತರರು ಕೂಡಲೇ 20 ಜನ ಕಾರ್ಮಿಕರನ್ನು ತೆಗೆದುಕೊಂಡು ರುದ್ರಭೂಮಿಯನ್ನು ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ ಪೂಜೆ ಮಾಡಲು ಅನುವು ಮಾಡಿಕೊಡಲಾಗುವುದು ಎಂದು ತಿಳಿಸಿದರು.

ನಂತರ ಪಕ್ಕದಲ್ಲಿರುವ ವಿದ್ಯುತ್ ಚಿತಾಗಾರವನ್ನು ಪರಿಶೀಲಿಸಿ, ಶವಸಂಸ್ಕಾರದ ಬಗ್ಗೆ ಮಾಹಿತಿಯನ್ನು ಪಡೆದು ಸಾರ್ವಜನಿಕರಿಂದ ಹೆಚ್ಚಿನ ಹಣವನ್ನು ಪಡೆಯದೇ ನಿಗಧಿಪಡಿಸಿದ ಹಣವನ್ನು ಮಾತ್ರ ಪಡೆಯಬೇಕು ಎಂದು ಸಿಬ್ಬಂದಿಗಳಿಗೆ ಸೂಚಿಸಿದರು. ಸದರಿ ವಿದ್ಯುತ್ ಚಿತಾಗಾರದ ನಿರ್ವಹಣೆಗಾಗಿ ಪ್ರತಿ ವರ್ಷಕ್ಕೆ ಹತ್ತು ಲಕ್ಷ ರೂಪಾಯಿಗಳ ವೆಚ್ಚವಾಗುವುದೆಂದು ಸ್ಥಳೀಯ ಅಭಿಯಂತರರು ಮಾಹಿತಿ ನೀಡಿದರು.

ಚಾಮರಾಜಪೇಟೆಯಲ್ಲಿರುವ ಟಿ.ಆರ್. ಮಿಲ್ ರುದ್ರಭೂಮಿಗೆ ಭೇಟಿ ನೀಡಿ, ಸುಮಾರು 1.16 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುತ್ತಿರುವ ಸೌದೆಯಲ್ಲಿ ಸುಡುವ ಚಿತಾಗಾರ ಕಾಮಗಾರಿಯನ್ನು ಪರಿಶೀಲಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಬಿ.ವಿ. ಗಣೇಶ್ ರವರು ಹೆಣ ಸುಡಲು ವಿದ್ಯುತ್ ಹೆಚ್ಚು ಹೊರೆಯಾಗುವುದರಿಂದ ಈ ಸ್ಥಳದಲ್ಲಿ ಈಗಾಗಲೇ ಮಂಜೂರಾಗಿರುವ ವಿದ್ಯುತ್ ಚಿತಾಗಾರವನ್ನು ರದ್ದುಪಡಿಸಲಾಗಿದ್ದು ಹೆಣ ಸುಡಲು ಇಲ್ಲಿ ಸೂಕ್ತ ಗ್ರಿಲ್‌ಗಳನ್ನು ಮಾಡಿಸಲಾಗಿದ್ದು, ಒಂದೇ ಬಾರಿಗೆ 12 ಹೆಣಗಳನ್ನು ಕಡಿಮೆ ಕಟ್ಟಿಗೆಗಳಿಂದ ಸುಟ್ಟು, ಶವಸಂಸ್ಕಾರ ಮಾಡಬಹುದಾಗಿರುತ್ತದೆ. ಹಾಗೂ ಸತ್ತವರ ಸಂಬಂಧಿಗಳಿಗೆ ಬೂದಿ ಕೂಡ ಒದಗಿಸಬಹುದಾಗಿರುತ್ತದೆ ಎಂದು ತಿಳಿಸುತ್ತಾ, ರುದ್ರಭೂಮಿಯನ್ನು ವೈಜ್ಞಾನಿಕವಾಗಿ ಹಾಗೂ ಪರಿಸರದಾಯಕವಾಗಿ ನಿರ್ಮಿಸಿ ಅಭಿವೃದ್ಧಿ ಪಡಿಸಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಬಿ.ಟಿ. ರಮೇಶ್, ಮುಖ್ಯ ಅಭಿಯಂತರರು (ಪಶ್ಚಿಮ), ಶ್ರೀ ರಾಜೇಶ್, ಕಾರ್ಯಪಾಲಕ ಅಭಿಯಂತರರು, ಶ್ರೀ ಶ್ರೀನಾಥ್, ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ), ಶ್ರೀ ಗೋವಿಂದಯ್ಯ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಪಶ್ಚಿಮ) ಹಾಗೂ ಪಾಲಿಕೆಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**